ದಿ: 04.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಂ. ಪಿ. ವಕೀಲರಿಂದ:-**

1. 1ನೇ ಪ್ರತಿವಾದಿ ನನ್ನ ಅಣ್ಣ. 2 ರಿಂದ 4ನೇ ಪ್ರತಿವಾದಿಯರು ನನ್ನ ಅಕ್ಕಂದಿರು. 6ನೇ ಪ್ರತಿವಾದಿಯು 1ನೇ ಪ್ರತಿವಾದಿಯ ಹೆಂಡತಿ. 7 ರಿಂದ 13ನೇ ಪ್ರತಿವಾದಿಯರು 1ನೇ ಪ್ರತಿವಾದಿಯ ವಾರಸುದಾರರು. 14 ರಿಂದ 16ನೇ ಪ್ರತಿವಾದಿಯರು ನನ್ನ ಅಣ್ಣನ ಮಗ ಉಮೇಶನ ಹೆಂಡತಿ ಹಾಗೂ ಮಕ್ಕಳು ಎಂದರೆ ಸರಿ. 17 ಹಾಗೂ 18ನೇ ಪ್ರತಿವಾದಿಯರು ನನ್ನ ಅಣ್ಣನ ಮಗ ಚಂದ್ರಶೇಖರರವರ ವಾರಸುದಾರರು ಎಂದರೆ ಸರಿ. 19 ಹಾಗೂ 20ನೇ ಪ್ರತಿವಾದಿಯರು ನನ್ನ ಅಣ್ಣನ ಮಗ ಗುರುದೇವರವರ ವಾರಸುದಾರರು ಎಂದರೆ ಸರಿ. ವಾದಿ, 1 ರಿಂದ 5, 7 ರಿಂದ 20ನೇ ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರು ಎಂದರೆ ನನಗೆ ತಿಳಿದಿಲ್ಲ. 21ನೇ ಪ್ರತಿವಾದಿ ನಮ್ಮ ಕುಟುಂಬಕ್ಕೆ ಸೇರಿದವರು ಅಲ್ಲ ಎಂದರೆ ಸರಿ. ನನ್ನ ಹಾಗೂ ಬಸಮ್ಮರವರ ಮದುವೆ 1970-71ರಲ್ಲಿ ಜರುಗಿರುತ್ತದೆ. ಸದರಿ ಬಸಮ್ಮ 2ನೇ ಪ್ರತಿವಾದಿಯ ಮಗಳು ಎಂದರೆ ಸರಿ. ಸದರಿ ಬಸಮ್ಮ ಕೋಲಾರ ಜಿಲ್ಲೆಯ ಕಳ್ಳಿಪುರ ಗ್ರಾಮದವರು ಎಂದರೆ ಸರಿ. ವಾದಿಯರು ನಮ್ಮ ಮಕ್ಕಳು ಎಂದರೆ ಸರಿ, ಸಾಕ್ಷಿ ಮುಂದುವರೆದು, ನನ್ನ ಮಗಳಾದ ಸರ್ವಮಂಗಳಾ ಎನ್ನುವವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮದುವೆಯಾದ 3-4 ವರ್ಷಗಳ ಒಳಗೆ ವಾದಿಯರು ಜನಿಸಿರುತ್ತಾರೆ. 1978ನೇ ಸಾಲಿನಲ್ಲಿ ಸದರಿ ಬಸಮ್ಮ ವಾದಿಯರನ್ನು ಕರೆದುಕೊಂಡು ನನ್ನನ್ನು ಬಿಟ್ಟು ಹೋಗಿರುತ್ತಾರೆ. ಸದರಿ ಸರ್ವಮಂಗಳಾ ನನ್ನ ಬಳಿಯೇ ಇರುತ್ತಾರೆ. ನನ್ನ ಹಾಗೂ ಸದರಿ ಬಸಮ್ಮರವರ ನಡುವೆ ಭಿನ್ನಾಭಿಪ್ರಾಯ ಉಂಟಾಗಿ ನಾನು ಆಕೆ ಹಾಗೂ ವಾದಿಯರನ್ನು ತೊರೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಆಕೆಯೇ ಒಡವೆಗಳನ್ನು ಹಾಗೂ ಹಣವನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

2. ಆನೇಕಲ್ ನ ರಾಜಕಾಂತಮ್ಮ ಎನ್ನುವವರಿಂದ ಸದರಿ ಬಸಮ್ಮ ಮನೆ ಸ್ವತ್ತನ್ನು ಖರೀದಿಸಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ನಾನು ಆಕೆಯ ಹೆಸರಿನಲ್ಲಿ ಖರೀದಿಸಿದ್ದೆನು ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ನಾನು ಎಂದೂ ವಾಸವಿರಲಿಲ್ಲ. ಸದರಿ ಸ್ವತ್ತಿನ ಬಾಡಿಗೆ ಹಣವನ್ನು ಸದರಿ ರಾಜಕಾಂತಮ್ಮ ಸದರಿ ಬಸಮ್ಮರವರಿಗೆ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಖರೀದಿಸಲು ನಾನು ಹಣ ನೀಡಿರುತ್ತೇನೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುತ್ತದೆ. ನನ್ನ ಹಾಗೂ ಸದರಿ

ರಾಜಕಾಂತಮ್ಮರವರ ವಿರುದ್ಧ ಸದರಿ ಸ್ವತ್ತಿನ ಸಂಬಂಧ ಸದರಿ ಬಸಮ್ಮ ದಾವೆ ಹೂಡಿದ್ದರು ಎಂದರೆ ಸರಿ. ನಾನು ಸದರಿ ರಾಜಕಾಂತಮ್ಮರವರೊಂದಿಗೆ ಅಕ್ರಮ ಸಂಬಂಧ ಹೊಂದಿ ಸದರಿ ಮನೆಯಲ್ಲಿ ವಾಸವಿದ್ದೆನು ಎಂದರೆ ಸರಿಯಲ್ಲ. ಸದರಿ ಸ್ವತ್ತಿನಿಂದ ಸದರಿ ಬಸಮ್ಮನಿಗೆ ಯಾವುದೇ ಆದಾಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಬಸಮ್ಮ ಹಾಗೂ ವಾದಿಯರಿಗೆ ನಾನು ನ್ಯಾಯಾಲಯದಲ್ಲಿ ಯಾವುದೇ ಜೀವನಾಂಶ ಪಾವತಿಸಿಲ್ಲ ಎಂದರೆ ಸಾಕ್ಷಿ ನಾನು ನ್ಯಾಯಾಲಯದಲ್ಲಿ ಅವರಿಗೆ ಒಮ್ಮೆ 10 ಸಾವಿರಗಳನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆ ರೀತಿ ಯಾವುದೇ ಜೀವನಾಂಶ ನೀಡಿಲ್ಲ ಎಂದರೆ ಸರಿಯಲ್ಲ. 1980 ರಿಂದ 1996ರವರೆಗೆ ನಮ್ಮ ನಡುವೆ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇದ್ದವು ಎಂದರೆ ಸರಿ. ಸದರಿ ರಾಜಕಾಂತಮ್ಮ ನಿಂದ ಖರೀದಿಸಿದ ಮನೆಯಿಂದ ವಾದಿಯರಿಗೆ ಆದಾಯ ಇರುತ್ತದೆ ಎಂದು ಬಿಂಬಿಸಿ ನಾನು ವಾದಿಯರಿಗೆ ಹಾಗೂ ಅವರ ತಾಯಿಗೆ ಯಾವುದೇ ಜೀವನಾಂಶ ನೀಡಿಲ್ಲ ಎಂದರೆ ಸರಿಯಲ್ಲ. 1978 ರಿಂದ ನಾನು ಎಂದೂ ವಾದಿಯರ ಹಿತ ರಕ್ಷಣೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ವಾದಿಯರು ಅವರ ತಾಯಿಯ ಮಾತನ್ನು ಕೇಳಿ ನನ್ನೊಂದಿಗೆ ಬರದೇ ನನ್ನ ವಿರುದ್ಧ ನ್ಯಾಯಾಲಯದಲ್ಲಿ ಹಲವು ಪ್ರಕರಣಗಳನ್ನು ಹೂಡಿರುತ್ತಾರೆ ಎಂದು ನುಡಿಯುತ್ತಾರೆ. 1978 ರಿಂದ ವಾದಿಯರು ನನ್ನಿಂದ ಬೇರೆಯಾಗಿ ವಾಸವಿರುತ್ತಾರೆ ಎಂದರೆ ಸರಿ.

3. ವಾದಿಯರ ಲಾಲನೆ-ಪಾಲನೆಯನ್ನು ಅವರ ತಾಯಿಯೇ ಮಾಡಿರುತ್ತಾರೆ ಎಂದರೆ ಸರಿ. ನಾನು ಎಂದೂ ವಾದಿಯರ ಯೋಗಕ್ಷೇಮ ನೋಡಿಕೊಳ್ಳಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರುಗಳು ನನ್ನ ವಿರುದ್ಧ ಮೊದಲಿನಿಂದಲೂ ಪ್ರಕರಣಗಳನ್ನು ಹೂಡುತ್ತಾ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

4. ನಾನು 8 ವರ್ಷದವನಾಗಿದ್ದಾಗ ನನ್ನ ತಂದೆ ಮೃತ ಪಟ್ಟಿರುತ್ತಾರೆ. ನನ್ನ ತಾಯಿ 1998-99ರಲ್ಲಿ ಮೃತ ಹೊಂದಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಅನುಸೂಚಿ 16, 23 ಹಾಗೂ 24ನೇ ಸ್ವತ್ತುಗಳನ್ನು ನನ್ನ ಸ್ವಯಾರ್ಜಿತ ಸ್ವತ್ತುಗಳು ಎಂದು ಬರೆಸಿದ್ದು ಉಳಿದೆಲ್ಲಾ ಸ್ವತ್ತುಗಳು ನನಗೆ ಪಿತ್ರಾರ್ಜಿತವಾಗಿ ಹಾಗೂ ಒಟ್ಟು ಕುಟುಂಬದಲ್ಲಿ ಬಂದ ಸ್ವತ್ತುಗಳೇ ಎಂದರೆ ಸಾಕ್ಷಿ ನನ್ನ ಭಾಗಕ್ಕೆ ಪಿತ್ರಾರ್ಜಿತವಾಗಿ ಸರ್ವೆ ನಂ.14/2 ಹಾಗೂ ಸರ್ವೆ ನಂ.15/2 ಸ್ವತ್ತುಗಳು ಮಾತ್ರ ಬಂದಿರುತ್ತವೆ ಎಂದು ನುಡಿಯುತ್ತಾರೆ.

5. ಸರ್ವೆ ನಂ.14/2 ಹಾಗೂ 15/2 ಸ್ವತ್ತುಗಳು ಒಟ್ಟು 2 ಎಕರೆ 23 ಗುಂಟೆ ಇರುತ್ತದೆ ಎಂದರೆ ಸರಿ. ಹಳೆಯ ಸರ್ವೆ ನಂಬರ್ 96, ಹೊಸ ಸರ್ವೆ ನಂ.54 3 ಎಕರೆ 30 ಗುಂಟೆ ಇರುತ್ತದೆ ಎಂದರೆ ನನಗೆ ತಿಳಿದಿಲ್ಲ. 1970ರ ಸಾಲಿನಲ್ಲಿ ಸರ್ವೆ ನಂ.14/2 ಹಾಗೂ 15/2ರಲ್ಲಿ ತೆರೆದ ಬಾವಿ, ದ್ರಾಕ್ಷಿ ತೋಟ

ಇತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಆಗಲೇ ತೆಂಗಿನ ಮರಗಳು ಇದ್ದವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಖಾಲಿ ಜಮೀನು ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಕೊಳವೆ ಬಾವಿ ಹಾಕಲಾಗಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ನಾನು ಎಂದೂ ದ್ರಾಕ್ಷಿ ಬೆಳೆ ಬೆಳೆದಿರುವುದಿಲ್ಲ. ಸದರಿ ಜಮೀನಿನಲ್ಲಿ ನನ್ನ ತಂದೆ ತಾಯಿ ರಾಗಿ ಬೆಳೆ ಬೆಳೆಯುತ್ತಿದ್ದರು. ನನ್ನ ತಂದೆಯ ಮರಣದ ನಂತರ ಸದರಿ ಸ್ವತ್ತುಗಳಲ್ಲಿ ಏನು ಬೆಳೆ ಬೆಳೆಯುತ್ತಿದ್ದರು ನನಗೆ ತಿಳಿದಿಲ್ಲ, ಕಾರಣ ನಾನು ಆ ಸಮಯಕ್ಕೆ ಮನೆ ಬಿಟ್ಟು ಬಂದಿದ್ದೆ ಎಂದು ನುಡಿಯುತ್ತಾರೆ.

6. ಆ ಕಾಲಕ್ಕೆ ಸದರಿ ಹಳೆ ಸರ್ವೆ ನಂ.96ರಲ್ಲಿ ಸರ್ವೆ ತೋಪನ್ನು ಮಾಡಲಾಗಿತ್ತು ಎಂದರೆ ನನಗೆ ತಿಳಿದಿಲ್ಲ. ಸದರಿ ಜಮೀನಿನಲ್ಲಿ ಏನು ಬೆಳೆ ಬೆಳೆಯುತ್ತಿದ್ದೆವು ನನಗೆ ತಿಳಿದಿಲ್ಲ. ಸದರಿ ಜಮೀನಿನಲ್ಲಿ ಸರ್ವೆ ಕಡ್ಡಿಗಳನ್ನು ಕೋಲಾರದಿಂದ ತಂದು ನಾಟಿ ಮಾಡಿದ್ದೆವು ನನಗೆ ನೆನಪಿಲ್ಲ. ಕುಟುಂಬದ ಇತರೆ ಸ್ವತ್ತುಗಳಲ್ಲಿ ಹುಣಸೆ ಮರ ಹಾಗೂ ಹಲವು ಜಾತಿಯ ಮರಗಳು ಇದ್ದವು ಎಂದರೆ ನನಗೆ ತಿಳಿದಿಲ್ಲ. ನಮ್ಮ ಕುಟುಂಬಸ್ಥರು ಹೈನುಗಾರಿಕೆ ಸಹ ಮಾಡುತ್ತಿದ್ದರು ಹಾಗೂ ಒಂದು ಗಿರಣಿಯನ್ನೂ ಸಹ ನಡೆಸುತ್ತಿದ್ದರು ಎಂದರೆ ನನಗೆ ತಿಳಿದಿಲ್ಲ. ಸದರಿ ಸರ್ವೆ ನಂ.96ರ ಸಂಪೂರ್ಣ ಜಮೀನಿನಲ್ಲಿ ಈ ದಾವೆ ಹೂಡುವ ವರೆಗೆ ಯಾರು ಸಾಗುವಳಿ ಮಾಡುತ್ತಿದ್ದರು ಎಂದು ನನಗ ತಿಳಿದಿಲ್ಲ. ಅದರಂತೆ ಸರ್ವೆ ನಂ.14/2 ಹಾಗೂ 15/2 ಸಂಪೂರ್ಣ ಜಮೀನುಗಳಲ್ಲಿ ಯಾರು ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿ ನಾನು ಸದರಿ ಜಮೀನಿಗೆ ಹೋದರೆ ವಾದಿಯರು ಜಗಳ ಮಾಡುತ್ತಿದ್ದ ಕಾರಣ ಸದರಿ ಜಮೀನುಗಳನ್ನು ಖಾಲಿ ಬಿಟ್ಟಿದ್ದೆನು ಎಂದು ನುಡಿಯುತ್ತಾರೆ. ಸದರಿ ಮೂರು ಜಮೀನಿನ ಸಂಪೂರ್ಣ ವಿಸ್ತೀರ್ಣದಲ್ಲಿ 1970 ರಿಂದ ಈ ದಾವೆ ಹೂಡುವ ವರೆಗೆ ಯಾರು ಸ್ವಾಧೀನದಲ್ಲಿದ್ದರು ನನಗೆ ತಿಳಿದಿಲ್ಲ. ಸದರಿ ಜಮೀನುಗಳಲ್ಲಿ ನಾನು ಸ್ವಾಧೀನದಲ್ಲಿ ಇರಲಿಲ್ಲ.

7. 1966ರಲ್ಲಿ ನಾನು ಬಟ್ಟೆ ವ್ಯಾಪಾರ ಪ್ರಾರಂಭಿಸಿರುತ್ತೇನೆ. ನನ್ನ ತಂದೆ ಸಹ ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಸದರಿ ವ್ಯಾಪಾರವನ್ನು ಒಟ್ಟು ಕುಟುಂಬದ ಪರವಾಗಿ ಮಾಡುತ್ತಿದ್ದೇನೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ನಮ್ಮ ನಡುವೆ ಒಟ್ಟು ಕುಟುಂಬದ ಸ್ವತ್ತುಗಳ ವಿಭಾಗ ಆಗಿತ್ತೇ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಆ ಸಮಯ ನಮ್ಮ ನಡುವೆ ವಿಭಾಗ ಆಗಿರಲಿಲ್ಲ ಎಂದರೆ ನನಗ ತಿಳಿದಿಲ್ಲ. ಸದರಿ ಬಟ್ಟೆಯ ವ್ಯಾಪಾರವನ್ನು ನಾನು ಸ್ವಂತವಾಗಿ ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವ್ಯಾಪಾರವನ್ನು ನಾನು ನೋಂದಣಿ ಮಾಡಿಸಿರಲಿಲ್ಲ. ನಾನು ಸದರಿ ವ್ಯಾಪಾರವನ್ನು ಸ್ವಂತವಾಗಿ ನಡೆಸುತ್ತಿದ್ದೆನು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯ ನಾನು ಮನೆ

ಮನೆಗೆ ತೆರಳಿ ವ್ಯಾಪಾರ ಮಾಡುತ್ತಿದ್ದು ಯಾವುದೇ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಬೆಂಗಳೂರಿನಿಂದ ಬಟ್ಟೆಯನ್ನು ಸಗಟು ಖರೀದಿಸಿ ತಂದು ವ್ಯಾಪಾರ ಮಾಡುತ್ತಿದ್ದೆನು. ಆ ಸಮಯ ನಾನು ಯಾವ ಬ್ಯಾಂಕಿನಲ್ಲೂ ಖಾತೆ ಹೊಂದಿರಲಿಲ್ಲ. ಈಗಲೂ ಸಹ ನನಗೆ ಯಾವುದೇ ಬ್ಯಾಂಕ್ ಖಾತೆ ಇರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಆದಾಯ ತೆರಿಗೆ ರಿಟರ್ನ್ ನಲ್ಲಿ ನಾನು ಸ್ವಂತ ವ್ಯಾಪಾರ ಮಾಡುತ್ತಿರುತ್ತೇನೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ನಾನು ಯಾವುದೇ ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಬಟ್ಟೆಯನ್ನು ಸಗಟು ಖರೀದಿಸಲು ನಾನು ಕೂಲಿ ಮಾಡಿ ಹಣ ಕೂಡಿಟ್ಟಿದ್ದೆನು. ನಾನು ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆನು. ಅಲ್ಲಿ ನಾನು ಮದನ್ ಲಾಲ್, ಶಾಂತಿ ಲಾಲ್ ಹಾಗೂ ಇತರೆಯವರ ಅಂಗಡಿಗಳಲ್ಲಿ ಕೆಲಸ ಮಾಡುತ್ತಿದ್ದೆ. ನಾನು 1966 ರಿಂದ ಅವರುಗಳ ಬಳಿ ಕೆಲಸ ಮಾಡುತ್ತಿದ್ದೆ ಆಗ ನನಗೆ ಸುಮಾರು 17 ವರ್ಷ ವಯಸ್ಸು. ಆ ಸಂಬಂಧ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನಾನು ಹೇಳಿದ ಮಾಲೀಕರುಗಳು ಸಗಟು ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಸದರಿ ಕೂಲಿ ಹಣವನ್ನು ನಾನು ಯಾವ ಬ್ಯಾಂಕಿನಲ್ಲಿಯೂ ಜಮೆ ಮಾಡಿರುವುದಿಲ್ಲ. ಸಗಟು ವ್ಯಾಪಾರಿಗಳು ತಮ್ಮ ವ್ಯಾಪಾರದ ಆಡಿಟ್ ಮಾಡಿಸುತ್ತಾರೇಯೇ ಎಂದರೆ ನನಗೆ ತಿಳಿದಿಲ್ಲ. ನಾನು ವ್ಯಾಪಾರ ಪ್ರಾರಂಭಿಸಿರುತ್ತೇನೆ ಎಂದು ಹೇಳಲಾದ ಸಮಯ ನಮ್ಮ ಒಟ್ಟು ಕುಟುಂಬಕ್ಕೆ ಉತ್ತಮ ಆದಾಯ ಇತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಆ ಸಮಯ ನಮಗೆ ಊಟ ಹಾಗೂ ಬಟ್ಟೆಗೆ ಸಹ ಕಷ್ಟ ಇತ್ತು ಎಂದು ನುಡಿಯುತ್ತಾರೆ. ಸದರಿ ಬಟ್ಟೆ ವ್ಯಾಪಾರದಿಂದ ಬಂದ ಹಣವನ್ನು ನಾನು ಜಮೀನಿನ ಅಭಿವೃದ್ಧಿಗೆ ಬಳಸಿರುವುದಿಲ್ಲ. ಸದರಿ ಹಣವನ್ನು ಒಟ್ಟು ಕುಟುಂಬದ ಸದಸ್ಯರ ಒಳಿತಿಗಾಗಿ ಬಳಸಿರುವುದಿಲ್ಲ. ಸದರಿ ವ್ಯಾಪಾರದಿಂದ ನನಗೆ ಎಷ್ಟು ಆದಾಯ ಇತ್ತು ಎಂದರೆ ಸಾಕ್ಷಿ ಅದರಿಂದ ಬರುತ್ತಿದ್ದ ಆದಾಯ ನನ್ನ ಜೀವನ ನಿರ್ವಹಣೆಗೆ ಸಾಕಾಗುತ್ತಿತ್ತು ಎಂದು ನುಡಿಯುತ್ತಾರೆ.

<u>ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.</u>

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ. ಶ್ರೀಕಾಂತ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಆನೇಕಲ್.**